QP CODE: 34201

ದ್ವಿತೀಯ ಸೆಮಿಸ್ಟರ್ ಬಿ.ಸಿ.ಎ. ಪದವಿ ಪರೀಕ್ಷೆ, ಮೇ / ಜೂನ್, 2026

(ಎನ್‌ಇಪಿ ಸ್ಕೀಂ ಪಠ್ಯಕ್ರಮ)

ಕನ್ನಡ ಭಾಷಾ ಪತ್ರಿಕೆ - 2

(NBB 0010) ಮನುಜ ಮತ - 2

ಅವಧಿ : 2 ಗಂಟೆಗಳು ಗರಿಷ್ಠ ಅಂಕಗಳು : 60

ವಿದ್ಯಾರ್ಥಿಗಳಿಗೆ ಸೂಚನೆಗಳು:

1. ವಿದ್ಯಾರ್ಥಿಯು ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ಸ್ಪಷ್ಟವಾಗಿ ಮಾರ್ಜಿನ್ ಗೆರೆಯ ಒಳಗೆ ಬರೆಯಬೇಕು.
2. ವಿಭಾಗ ಸಂಖ್ಯೆ ಹಾಗೂ ಪ್ರಶ್ನೆ ಸಂಖ್ಯೆಗಳನ್ನು ನಮೂದಿಸದೇ ಇರುವ ಉತ್ತರಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.
3. ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರವನ್ನು ಉತ್ತರ ಪತ್ರಿಕೆಯ ಮೊದಲ ಪುಟದಲ್ಲಿ ಬರೆಯಬೇಕು ಹಾಗೂ ಅದೇ ಪ್ರಶ್ನೆಗಳಿಗೆ ಉತ್ತರವನ್ನು ಪುನರಾವರ್ತಿಸಬಾರದು.
4. ಪ್ರಶ್ನೆ ಪತ್ರಿಕೆಯಲ್ಲಿನ ವಿಭಾಗ - I ರಲ್ಲಿನ ಬಹು ಆಯ್ಕೆಯ ಪ್ರಶ್ನೆಗಳಿಗೆ ನೀಡಲಾದ ಆಯ್ಕೆ ಉತ್ತರಗಳ (Options) ಮೇಲೆ ಯಾವುದೇ ರೀತಿಯ ಗುರುತು ಸೂಚಕ ಚಿಹ್ನೆಗಳಾದ ವೃತ್ತ ಹಾಕುವುದು, ಚುಕ್ಕೆ ಇಡುವುದು, ಸರಿ ಗುರುತು ಮಾಡುವುದು (✓) ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲಾಗಿದೆ. ಪ್ರಶ್ನೆ ಪತ್ರಿಕೆಯ ಮೇಲೆ (ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ) ಬೇರೆ ಯಾವುದೇ ತರಹದ ಬರವಣಿಗೆಗಳನ್ನು ಮಾಡಬಾರದು.

ವಿಭಾಗ - I

I. ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿ. **(10x1=10)**

I-1. ಡಾ. ಸಿದ್ದಲಿಂಗಯ್ಯ ಅವರ ಆತ್ಮಕಥೆಯ ಹೆಸರೇನು?
(ಅ) ಸಾವಿರಾರು ನದಿಗಳು (ಆ) ಹೊಲೆಮಾದಿಗರ ಹಾಡು
(ಇ) ಊರು ಕೇರಿ (ಈ) ಅವತಾರಗಳು

I-2. ಡಾ. ಯು.ಆರ್. ಅನಂತಮೂರ್ತಿ ಅವರು ಪದ್ಮಭೂಷಣ ಪ್ರಶಸ್ತಿ ಪಡೆದ ವರ್ಷ ಯಾವುದು ?
(ಅ) 2014 (ಆ) 1996 (ಇ) 1980 (ಈ) 1998

I-3. ಅ.ರಾ.ಮಿತ್ರ ಅವರ ಹಾಸ್ಯ ಕೃತಿ ಹೆಸರೇನು?
(ಅ) ಶಬ್ದಕಲ್ಪ (ಆ) ಪಂಡಿತನ ಸಂಕಟ (ಇ) ತಪ್ಪಿದ ಎಳೆ (ಈ) ಒಳನೋಟಗಳು

I-4. ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ಯಾವುದು?
(ಅ) ಮಲೆಗಳಲ್ಲಿ ಮದುಮಗಳು (ಆ) ಸಮಗ್ರ ಸಾಹಿತ್ಯ
(ಇ) ನೆನಪಿನ ದೋಣಿಯಲ್ಲಿ (ಈ) ಶ್ರೀರಾಮಾಯಣ ದರ್ಶನಂ

I-5. 'ಪ್ರೇಮ ಕವಿ' ಎಂದು ಹೆಸರಾದ ಕನ್ನಡದ ಕವಿ ಯಾರು?
(ಅ) ದ.ರಾ.ಬೇಂದ್ರೆ (ಆ) ಜಿ.ಎಸ್. ಶಿವರುದ್ರಪ್ಪ
(ಇ) ಕೆ.ಎಸ್. ನರಸಿಂಹಸ್ವಾಮಿ (ಈ) ಕೆ.ಎಸ್. ನಿಸಾರ್ ಅಹಮದ್

I-6. 'ಮರಳಿ ಮಣ್ಣಿಗೆ' ಕಾದಂಬರಿಯ ಕರ್ತೃ ಯಾರು?
(ಅ) ಶಿವರಾಮ ಕಾರಂತ (ಆ) ಅ.ನ.ಕೃ.
(ಇ) ದೇವನೂರು ಮಹದೇವ (ಈ) ಬಸವರಾಜ ಕಟ್ಟೀಮನಿ

I-7. 'ನನ ಕೈಯ ಹಿಡಿದಾಕೆ' ಕವನ ಈ ಕೆಳಗಿನ ಯಾವ ಸಂಕಲನದಲ್ಲಿದೆ?
(ಅ) ನಾದಲೀಲೆ (ಆ) ಉಯ್ಯಾಲೆ (ಇ) ಗರಿ (ಈ) ನಾಕುತಂತಿ

ಗ್ರಂಥಾಲಯ

I-8. ಅಂಟಿಗೆ ಪಂಟಿಗೆ ಪದಗಳನ್ನು ಯಾವ ಹಬ್ಬದಲ್ಲಿ ಹಾಡಲಾಗುತ್ತದೆ?
(ಅ) ಭೂಮಿ ಹುಣ್ಣಿಮೆ (ಆ) ದೀಪಾವಳಿ (ಇ) ಸಂಕ್ರಾಂತಿ (ಈ) ಮಾರಿಹಬ್ಬ

I-9. 'ಆಗದು ಎಂದು ಕೈಲಾಗದು ಎಂದು' ಹಾಡು ಯಾವ ಚಲನಚಿತ್ರದ್ದು?
(ಅ) ಗಂಧದ ಗುಡಿ (ಆ) ಸನಾದಿ ಅಪ್ಪಣ್ಣ
(ಇ) ಬಂಗಾರದ ಮನುಷ್ಯ (ಈ) ಒಡಹುಟ್ಟಿದವರು

I-10. 'ಕರಿಷ್ಮಾ' ಪಾತ್ರ ಕೆಳಗಿನ ಯಾವ ಪಠ್ಯಭಾಗದಲ್ಲಿ ಬರುತ್ತದೆ?
(ಅ) ಮೌನಿ (ಆ) ಯಂತ್ರರ್ಷಿ
(ಇ) ಕೌದಿ (ಈ) ಕಡೆತನದ ಕಾಯೋ ಅಭಿಮಾನ

ವಿಭಾಗ - II

II. ಐದು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(5x3=15)**

II-1. ಇಂಟ್ರಾ ಡೇ ಟ್ರೇಡಿಂಗ್
II-2. ಪ್ರಜಾಪ್ರಭುತ್ವದ ಆರು ಸ್ಥಂಭಗಳನ್ನು ಹೆಸರಿಸಿ.
II-3. ಡಾ। ರಾಜಕುಮಾರ್
II-4. ಕುಪ್ಪಣ್ಣ ಭಟ್ಟ
II-5. ಕುವೆಂಪು
II-6. ಗೋಪಾಲಯ್ಯ
II-7. ಕೌದಿಯ ಬಹೂಪಯೋಗ
II-8. ನಿಮ್ಮನ್ನೇಕೆ ಕೊಂದರು ಕವನದ ಆಶಯ

ವಿಭಾಗ - III

III. ಮೂರು ಪ್ರಶ್ನೆಗಳಿಗೆ ಉತ್ತರಿಸಿ. **(3x5=15)**

III-1. ಸಂತೆ ಕವಿತೆಯ ಸಂದೇಶವೇನು?
III-2. ಜೀವನ ತಂತ್ರಜ್ಞಾನ ಪದ್ಯದ ಪ್ರಮುಖ ನಿಲುವೇನು?
III-3. ದಾಂಪತ್ಯದ ಸಾಮರಸ್ಯವನ್ನು 'ಬಾರೆ ನನ್ನ ಶಾರದೆ' ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.
III-4. ಹಾಲಿನವಳ ಲೆಕ್ಕ ಪ್ರಬಂಧದ ಮಹತ್ವವೇನು?
III-5. 'ಆಗದು ಎಂದು ಕೈಲಾಗದು ಎಂದು' ಗೀತೆಯಲ್ಲಿ ದುಡಿಮೆ ಮಹತ್ವ

ವಿಭಾಗ - IV

IV. ಈ ಕೆಳಗಿನ ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ. **(2x10=20)**

IV-1. ಕುಪ್ಪಣ್ಣ ಭಟ್ಟರ ಪ್ರಪಂಚ ನಿರ್ಮಾಮವಾದ ಕಥೆಯನ್ನು 'ಮೌನಿ' ಕಥೆಯ ಮೂಲಕ ವಿವರಿಸಿ.

ಅಥವಾ

ಯಂತ್ರರ್ಷಿ ಕವಿತೆಯ ವಸ್ತು ಮತ್ತು ಆಶಯಗಳನ್ನು ಚರ್ಚಿಸಿ.

IV-2. ಕರಿಯಮ್ಮನ ಬದುಕು ದುರಂತವಾದ ಬಗೆಯನ್ನು ವಿನಯಾ ಒಕ್ಕುಂದ ಅವರ ಕಥೆಯ ಹಿನ್ನೆಲೆಯಲ್ಲಿ ಚರ್ಚಿಸಿ.

ಅಥವಾ

ಅಂಟಿಗೆ - ಪಂಟಿಗೆ ಹಾಡುಗಳ ಸಾಂಸ್ಕೃತಿಕ ಮಹತ್ವವನ್ನು ಸೋದಾಹರಣವಾಗಿ ವಿವರಿಸಿ.

* * *